# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 820/2022

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ , ಹಳಿಯಾಳ.

ವಿರುದ್ಧ

ಆರೋಪಿತ : ಜೇವಪ್ಪ ತಂದೆ ನಾರಾಯಣ ಜಾವಳೇಕರ,
ವಯಸ್ಸು : 55 ವರ್ಷ, ವೃತ್ತಿ : ಕೂಲಿ ಕೆಲಸ,
ಸಾಃ ಕಳಸಾಪುರ, ತಾಃ ಹಳಿಯಾಳ,
ಜಿಃ ಉತ್ತರ ಕನ್ನಡ.

## ದೋಷಾರೋಪಣೆ

ನಾನು ದೇಶಭೂಷಣ ಕೌಜಲಗಿ, ಬಿ.ಎ.ಎಲ್.ಎಲ್.ಬಿ. ಪ್ರ.ದ.ನ್ಯಾದಂ. ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೊಷಾರೋಪಣೆ ಏನೆಂದರೆ,

ಆರೋಪಿಯಾದ ನೀವು 09-05-2022 ರಂದು ಸಂಜೆ 03-45 ಗಂಟೆಗೆ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲ್ಲೂಕಿನ ಕನಕಪುರ ಗ್ರಾಮದ ಅಂಗನವಾಡಿ ಸಮೀಪ ಸಾರ್ವಜನಿಕ ಸ್ಥಳದಲ್ಲಿ , 90 ಎಂ. ಎಲ್ ನ ಓರಿಜಿನಲ್ ಚಾಯ್ಸ ಎಂಬ ಲೇಬಲ್ ಇರುವ ಮಧ್ಯ ತುಂಬಿದ 4 ಸ್ಯಾಚೇಟಗಳು, 90 ಎಮ್ ಎಲ್ ನ ಮಾಕ್ವಿನತೋಸ್ ವಿಸ್ಕಿ ಎಂಬ ಲೇಬಲ ಇರುವ ಮಧ್ಯ ತುಂಬಿದ 5 ಸ್ಯಾಚೇಟಗಳು, ಎರಡು ಪ್ಲಾಸ್ಟಿಕ್ ಗ್ಲಾಸ್, ಒಂದು ಲೀಟರ ನ ಒಂದು ನೀರಿನ ಖಾಲಿ ಬಾಟಲಿ, 90 ಎಂ. ಎಲ್ ನ ಓರಿಜಿನಲ್ ಚಾಯ್ಸ ಎಂಬ ಲೇಬಲ್ ಇರುವ ಖಾಲಿ 4 ಸ್ಯಾಚೇಟಗಳು ಹಾಗೂ ಒಂದು ರಟ್ಟಿನ ಬ್ಯಾಕ್ಸ ಇವುಗಳೊಂದಿಗೆ ಯಾವುದೇ ಪಾಸ್ ಅಥವಾ ಪರ್ಮಿಟ್ ಇಲ್ಲದೇ ಮಾರಾಟ ಮಾಡುತ್ತಿದ್ದಾಗ ಸದರಿ ಸ್ವತ್ತುಗಳೊಂದಿಗೆ ಸಿಗುವ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಎರಡನೇಯದಾಗಿ ಈ ಮೇಲೆ ಹೇಳಿದ ಅದೇ ದಿನಾಂಕ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ಹೇಳಿದ ಮಧ್ಯವನ್ನು ಯಾವುದೇ ಪಾಸ್ ಅಥವಾ ಪರ್ಮಿಟ್ ಇಲ್ಲದೇ ಮಾರಾಟ ಮಾಡುವ ಉದ್ದೇಶದಿಂದ ಅನಧಿಕೃತವಾಗಿ ಸಂಗ್ರಹಿಸುವ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರ : ವಿಚಾರಣೆಯಾಗಬೇಕು.

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಬೇಕೆಂದು ನಿರ್ದೇಶಿಸುತ್ತೇನೆ .

ಸ್ಥಳ : ಹಳಿಯಾಳ.
ದಿನಾಂಕ : 11-10-2023. ಪ್ರ.ದ.ನ್ಯಾದಂ., ಹಳಿಯಾಳ.